# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 16-02-2023 ಗುರುವಾರದಂದು ಅಪರಾಹ್ನ 3.30 ಗಂಟೆಗೆ ನಡೆದ "ವಿಶೇಷ ಸಿಂಡಿಕೇಟ್ ಸಭೆ"ಯ ನಡವಳಿಗಳು.

**ಉಪಸ್ಥಿತರು:**

1. ಪ್ರೊ. ಎಚ್.ರಾಜಶೇಖರ್ — ಕುಲಪತಿ (ಪ್ರಭಾರ) ಹಾಗೂ ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀ ಲಕ್ಷ್ಮಣ್ ಅಯ್ಯಪ್ಪ ಕುಲಗೋಡ್ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. — ಸದಸ್ಯರು
3. ಪ್ರೊ. ಜಿ.ವೆಂಕಟೇಶ್ ಕುಮಾರ್ — ಸದಸ್ಯರು
4. ಶ್ರೀಮತಿ ವೈ.ಕೆ.ಪವಿತ್ರ — ಸದಸ್ಯರು
5. ಡಾ. ಚೈತ್ರ ನಾರಾಯಣ — ಸದಸ್ಯರು
6. ಶ್ರೀ ಎಂ.ಬಿ. ಗಪ್ಪಣ್ಣ — ಸದಸ್ಯರು
7. ಡಾ. ನಿರ್ಮಲ ಹೆಚ್.ಎಂ — ಸದಸ್ಯರು
8. ಡಾ. ಜಯಶಂಕರ್ ಎನ್ — ಸದಸ್ಯರು
9. ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) — ಸದಸ್ಯರು
10. ಶ್ರೀಮತಿ ಶೈಲಜ.ವಿ.ಆರ್., ಕೆಎಎಸ್ — ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ
11. ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು — ವಿಶೇಷ ಆಹ್ವಾನಿತರು

**ಅನುಪಸ್ಥಿತರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಡಾ. ಎಸ್.ಹೆಚ್.ಗಂಗೇಗೌಡ

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿ, ಕುಲಪತಿಯವರ ಅನುಮತಿಯ ಮೇರೆಗೆ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಶೇಷ ಸಭೆ 01 | 103ನೇ ವಾರ್ಷಿಕ ಘಟಿಕೋತ್ಸವದ ಸಂಬಂಧ ದಿನಾಂಕ, ಸಮಯ ನಿಗಧಿಪಡಿಸಲು ಹಾಗೂ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಕುರಿತು. |
| | ಕುಲಚಿಸವ(ಪರೀಕ್ಷಾಂಗ)ನವರು ಎಲ್ಲಾ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿದರು. ನಂತರ ಮಾತನಾಡಿ ಈ ಬಾರಿ 103ನೇ ವಾರ್ಷಿಕ ಘಟಿಕೋತ್ಸವದಲ್ಲಿ 330 ವಿದ್ಯಾರ್ಥಿಗಳು ಪಿಎಚ್.ಡಿ, 120 ಚಿನ್ನದ ಪದಕದ ವಿಜೇತರು ಮತ್ತು 200 ನಗದು ಬಹುಮಾನ ಪಡೆದ ವಿದ್ಯಾರ್ಥಿಗಳು ಇದ್ದಾರೆ ಎಂದು ಹೇಳಿದರು. 27,000 ದಿಂದ 28,000 ವಿದ್ಯಾರ್ಥಿಗಳು ಪದವಿಯನ್ನು ಪಡೆದಿರುತ್ತಾರೆ. ಅರ್ಹತೆ ಪುಸ್ತಕವನ್ನು (Eligibility List) ಪ್ರಸಾರಂಗದಲ್ಲಿ ಮುದ್ರಿಸಲು ಡಿ.ಟಿ.ಪಿ ಆಪರೇಟರ್‌ಗಳ |

| | |
|---|---|
| | ಕೊರತೆ ಇರುವುದರಿಂದ ಘಟಿಕೋತ್ಸವ ಪುಸ್ತಕವನ್ನು ಸರಿಯಾದ ಸಮಯದಲ್ಲಿ ಮುದ್ರಿಸಲು ಸಾಧ್ಯವಾಗಿಲ್ಲ ಹಾಗೂ ಮುದ್ರಿಸಿದ ನಂತರ ಅದನ್ನು compile ಮಾಡಬೇಕಾಗುತ್ತದೆ. ಪುಸ್ತಕವನ್ನು ಮುದ್ರಿಸಿದ ನಂತರ ರಾಜ್ಯಪಾಲರಿಂದ ಅಂಕಿತವಾದ ನಂತರವೇ ಘಟಿಕೋತ್ಸವವನ್ನು ನಡೆಸಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು.<br>ಪ್ರೊ.ವೆಂಕಟೇಶ್ ಕುಮಾರ್ ಅವರನ್ನು ಹೊರತುಪಡಿಸಿ ಉಳಿದ ಎಲ್ಲಾ ಸದಸ್ಯರು ಘಟಿಕೋತ್ಸವದ ದಿನಾಂಕವನ್ನು ಮಾರ್ಚ್ 8, 2023 ರಿಂದ ಮಾರ್ಚ್ 15, 2023ರೊಳಗೆ ನಡೆಸಲು ನಿರ್ಧರಿಸಿದರು.<br>ಪ್ರೊ. ವೆಂಕಟೇಶ್ ಕುಮಾರ್ ಅವರು ಮಾತನಾಡಿ ಅಂಕಪಟ್ಟಿ ವಿತರಣೆ ಮಾಡದೆ ಹೇಗೆ ಘಟಿಕೋತ್ಸವ ಪ್ರಮಾಣ ಪತ್ರ ನೀಡಲು ಸಾಧ್ಯ ಎಂದು ಪ್ರಶ್ನಿಸಿದರು ಹಾಗೂ ಮುಂದಿನ ಕುಲಪತಿಯವರು ಘಟಿಕೋತ್ಸವದ ದಿನಾಂಕ ಮತ್ತು ಘಟಿಕೋತ್ಸವದ ಮುಖ್ಯ ಅತಿಥಿಯನ್ನು ನಿರ್ಧರಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.<br>ಡಾ.ಚೈತ್ರ ನಾರಾಯಣ ಅವರು ಮಾತನಾಡಿ ಈ ಸಭೆಯು ಘಟಿಕೋತ್ಸವಕ್ಕೆ ಸಂಬಂಧಿಸಿದ ವಿಶೇಷ ಸಿಂಡಿಕೇಟ್ ಸಭೆಯಾಗಿರುವುದರಿಂದ ಎಲ್ಲಾ ಸಿಂಡಿಕೇಟ್ ಸದಸ್ಯರ ಸಮ್ಮುಖದಲ್ಲಿ ಮುಖ್ಯ ಅತಿಥಿಗಳನ್ನು ಆಯ್ಕೆ ಮಾಡುವುದು ಸೂಕ್ತ ಎಂದು ತಿಳಿಸಿದರು.<br>ಶ್ರೀ ಎಂ.ಬಿ. ಗಪ್ಪಣ್ಣ ಮತ್ತು ಡಾ. ನಿರ್ಮಲ ಹೆಚ್.ಎಂ, ಸಿಂಡಿಕೇಟ್ ಸದಸ್ಯರು ಅವರು ಮಾತನಾಡಿ ಘಟಿಕೋತ್ಸವದ ದಿನಾಂಕ ಮತ್ತು ಮುಖ್ಯ ಅತಿಥಿಗಳ ಬಗ್ಗೆ ಚರ್ಚಿಸಲು ಈ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆದಿರುವ ಉದ್ದೇಶ ಆಗಿರುವುದರಿಂದ ಈ ಸಭೆಯಲ್ಲಿ ಮುಖ್ಯ ಅತಿಥಿಯನ್ನು ತೀರ್ಮಾನಿಸುವುದು ಸೂಕ್ತ ಎಂದು ತಿಳಿಸಿದರು.<br>ಪ್ರೊ. ವೆಂಕಟೇಶ್ ಕುಮಾರ್ ಅವರು ಮಾತನಾಡಿ ಇಂದು ನೀವು ಈ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಂಡರೂ ಅದಕ್ಕೆ ನನ್ನ ಸಮ್ಮತಿ ಇರುವುದಿಲ್ಲ ಹಾಗೂ ನಾನು ಯಾರನ್ನು ಒತ್ತಾಯಿಸುವುದಿಲ್ಲ ಇದು ನನ್ನ ವಿನಂತಿ ಎಂದು ಪರಿಗಣಿಸಬೇಕಾಗಿ ಸಭೆಗೆ ಕೋರಿದರು.<br>ಪ್ರೊ. ಡಿ.ಪಿ ಸಿಂಗ್, Former Chairperson, University Grants Commission, New Delhi ಹಾಗೂ ಶ್ರೀ ಬಿ.ಎಸ್.ಪಾಟೀಲ್, ಪ್ರಸ್ತುತ ಲೋಕಾಯುಕ್ತ ಇವರನ್ನು ಮುಖ್ಯ ಅತಿಥಿಯನ್ನಾಗಿ ಕುಲಪತಿಯವರು ಆಯ್ಕೆ ಮಾಡಿದರು.<br>ಡಾ.ಚೈತ್ರನಾರಾಯಣ ಅವರು ಶ್ರೀಮತಿ ಸುಧಾಮೂರ್ತಿ ಇವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಲು ಸೂಚಿಸಿದರು.<br>ಶ್ರೀಮತಿ ಪವಿತ್ರ.ವೈ.ಕೆ ಅವರು ಮಾತನಾಡಿ ಮಹಿಳಾ ದಿನಾಚರಣೆಯ ಮಾಹೆ ಆಗಿರುವುದರಿಂದ ಶ್ರೀಮತಿ ಸುಧಾಮೂರ್ತಿಯವರನ್ನು ಆಯ್ಕೆ ಮಾಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. |
| **ತೀರ್ಮಾನ**<br>1 | 103ನೇ ವಾರ್ಷಿಕ ಘಟಿಕೋತ್ಸವಕ್ಕೆ ದಿನಾಂಕವನ್ನು ಮಾರ್ಚ್ 8, 2023 ರಿಂದ ಮಾರ್ಚ್ 15 ರೊಳಗೆ ದಿನಾಂಕವನ್ನು ನಿಗದಿಪಡಿಸಲು ಸಿಂಡಿಕೇಟ್ ನಿರ್ಧರಿಸಿತು ಹಾಗೂ ಮುಖ್ಯ ಅತಿಥಿಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ~~ನಾಲ್ಕು~~ ಮೂರು ಹೆಸರುಗಳನ್ನು ಸೂಚಿಸಲಾಯಿತು (ಪ್ರೊ.ವೆಂಕಟೇಶ್ ಕುಮಾರ್ ಅವರನ್ನು ಹೊರತುಪಡಿಸಿ) ಎಲ್ಲಾ ಸಿಂಡಿಕೇಟ್ ಸದಸ್ಯರು ಇದಕ್ಕೆ ಸಮ್ಮತಿ ಸೂಚಿಸಿದರು.<br>1. ಪ್ರೊ. ಡಿ.ಪಿ.ಸಿಂಗ್, ಅವರ ಪೂರ್ಣ ಹೆಸರು ಧೀರೇಂದ್ರ ಪಾಲ್ ಸಿಂಗ್, ಒಬ್ಬ ಭಾರತೀಯ ನೈಸರ್ಗಿಕವಾದಿ ಮತ್ತು ಶೈಕ್ಷಣಿಕ ನಿರ್ವಾಹಕರು. 22 ಆಗಸ್ಟ್ 2022 ರಂದು ಉತ್ತರ ಪ್ರದೇಶ ಸರ್ಕಾರ ಅವರನ್ನು ಮುಖ್ಯಮಂತ್ರಿಯ ಶಿಕ್ಷಣ ಸಲಹೆಗಾರ ಎಂದು ಹೆಸರಿಸಿತು. ಅವರು ಮೂರು ವಿಭಿನ್ನ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ<br>2. ಶ್ರೀ ಬಿ.ಎಸ್.ಪಾಟೀಲ್, Hon'ble Justice, Karnataka Lokayukta, Dr.B.R.Ambedkar Veedhi, M.S.Building, Bangalore.<br>3. ಶ್ರೀಮತಿ ಸುಧಾಮೂರ್ತಿ **ಕನ್ನಡ ಮತ್ತು ಇಂಗ್ಲಿಷ್ ಬರಹಗಾರ್ತಿ, ಶ್ರೀಮತಿ ಸುಧಾಮೂರ್ತಿ ತಮ್ಮ ವೃತ್ತಿಪರ ಜೀವನವನ್ನು ಕಂಪ್ಯೂಟರ್ ವಿಜ್ಞಾನಿ ಮತ್ತು ಎಂಜಿನಿಯರ್ ಆಗಿ** ಆರಂಭಿಸಿದರು. ಅವರು ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದಾರೆ ಹಾಗೂ 'ಬಿಲ್ |

| | |
|---|---|
| | ಗೇಟ್ಸ್ ಪ್ರತಿಷ್ಠಾನ'ದ ಸಾರ್ವಜನಿಕ ಆರೋಗ್ಯ ಉಪಕ್ರಮಗಳ ಸದಸ್ಯರಾಗಿದ್ದಾರೆ. |
| **ವಿಶೇಷ ಸಭೆ 02** | 103ನೇ ವಾರ್ಷಿಕ ಘಟಿಕೋತ್ಸವ ಸಂಬಂಧ ಗೌರವ ಡಾಕ್ಟರೇಟ್ ಪದವಿ ಪಡೆಯಲು ಗಣ್ಯರ ಹೆಸರುಗಳನ್ನು ಶಿಫಾರಸ್ಸು ಮಾಡುವ ಬಗ್ಗೆ. |
| | ಘನತೆವೆತ್ತ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡಿರುವ ಡಾ. ಚೈತ್ರ ನಾರಾಯಣ, ಶ್ರೀ ಗಪ್ಪಣ್ಣ, ಸಿಂಡಿಕೇಟ್ ಸದಸ್ಯರು ಮತ್ತು ಕರ್ನಾಟಕ ಸರ್ಕಾರದಿಂದ ನಾಮ ನಿರ್ದೇಶನಗೊಂಡಿರುವ ಶ್ರೀಮತಿ ಪವಿತ್ರ.ವೈ.ಕೆ, ಸಿಂಡಿಕೇಟ್ ಸದಸ್ಯರು ಇವರು 103ನೇ ವಾರ್ಷಿಕ ಘಟಿಕೋತ್ಸವ ಸಂಬಂಧ ಗೌರವ ಡಾಕ್ಟರೇಟ್ ಪದವಿ ಪಡೆಯಲು ಶ್ರೀ ಕೆ.ಬಿ.ಗಣಪತಿಯವರ ಹೆಸರನ್ನು ಸೂಚಿಸಿದರು. ಡಾ. ಚೈತ್ರ ನಾರಾಯಣ ಅವರು ಎಲ್ಲಾ ಸದಸ್ಯರಿಗೆ ಶ್ರೀ.ಕೆ.ಬಿ.ಗಣಪತಿ ಇವರನ್ನು ಗೌರವ ಡಾಕ್ಟರೇಟ್‌ಗೆ ಪರಿಗಣಿಸಬೇಕೆಂದು ವಿನಂತಿಸಿದರು ಹಾಗೂ ಅವರು ಈ ಪ್ರಶಸ್ತಿಯನ್ನು ಪಡೆಯಲು ಅತ್ಯಂತ ಅರ್ಹ ವ್ಯಕ್ತಿಗಳಲ್ಲಿ ಒಬ್ಬರು ಎಂದು ತಾವು ಭಾವಿಸುವುದಾಗಿ ಸಭೆಗೆ ತಿಳಿಸಿದರು.<br>ಕುಲಪತಿಯವರು ಪ್ರೊ. ಜಗತ್ ಭೂಷಣ ನಡ್ಡ, ನಿರ್ದೇಶಕರು, ಸಿ.ಇ.ಸಿ.ನವದೆಹಲಿ ಇವರ ಹೆಸರನ್ನು 103ನೇ ವಾರ್ಷಿಕ ಘಟಿಕೋತ್ಸವ ಸಂಬಂಧ ಗೌರವ ಡಾಕ್ಟರೇಟ್ ಪದವಿ ಪಡೆಯಲು ಶಿಫಾರಸ್ಸು ಮಾಡಿದರು.<br>ಕುಲಸಚಿವರು ಸಾಹಿತ್ಯ ಕ್ಷೇತ್ರದಿಂದ ಪುಸ್ತಕ ಮನೆ ಹರಿಹರಪ್ರಿಯ ಇವರ ಹೆಸರನ್ನು 103ನೇ ವಾರ್ಷಿಕ ಘಟಿಕೋತ್ಸವ ಸಂಬಂಧ ಗೌರವ ಡಾಕ್ಟರೇಟ್ ಪದವಿ ಪಡೆಯಲು ಶಿಫಾರಸ್ಸು ಮಾಡಿದರು.<br>ಹಣಕಾಸು ಅಧಿಕಾರಿಯವರು ಶ್ರೀಮತಿ ತುಳಸಿಗೌಡ ಇವರ ಹೆಸರನ್ನು 103ನೇ ವಾರ್ಷಿಕ ಘಟಿಕೋತ್ಸವ ಸಂಬಂಧ ಗೌರವ ಡಾಕ್ಟರೇಟ್ ಪದವಿ ಪಡೆಯಲು ಶಿಫಾರಸ್ಸು ಮಾಡಿದರು.<br>ಶ್ರೀಮತಿ ಪವಿತ್ರ.ವೈ.ಕೆ. ಅವರು ಶ್ರೀ ಗಿರೀಶ್ ಹೊಸನಗರ ನಾಗರಾಜೇಗೌಡ ಇವರ ಹೆಸರನ್ನು 103ನೇ ವಾರ್ಷಿಕ ಘಟಿಕೋತ್ಸವ ಸಂಬಂಧ ಗೌರವ ಡಾಕ್ಟರೇಟ್ ಪದವಿ ಪಡೆಯಲು ಶಿಫಾರಸ್ಸು ಮಾಡಿದರು. |
| **ತೀರ್ಮಾನ** | 103ನೇ ವಾರ್ಷಿಕ ಘಟಿಕೋತ್ಸವ ಸಂಬಂಧ ಗೌರವ ಡಾಕ್ಟರೇಟ್ ಪದವಿ ಪಡೆಯಲು (ಪ್ರೊ.ವೆಂಕಟೇಶ್ ಕುಮಾರ್ ಅವರನ್ನು ಹೊರತುಪಡಿಸಿ) ಉಳಿದ ಎಲ್ಲಾ ಸಿಂಡಿಕೇಟ್ ಸದಸ್ಯರು ಈ ಕೆಳಕಂಡ ಗಣ್ಯರ ಹೆಸರುಗಳನ್ನು ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಶಿಫಾರಸ್ಸು ಮಾಡಲು ತಮ್ಮ ಒಪ್ಪಿಗೆಯನ್ನು ಸೂಚಿಸಿದರು.<br>1. ಶ್ರೀ ಕೆ.ಬಿ.ಗಣಪತಿ is an Indian entrepreneur and author. He is the Chief Editor of Star of Mysore, an Indian evening daily newspaper in the English language published and widely read in Mysore. He is also the editor of Mysooru Mithra, a morning daily newspaper of Mysore and in Kannada language. He has also written a number of books.<br>2. ಪ್ರೊ. ಜಗತ್ ಭೂಷಣ ನಡ್ಡ, Director, Consortium for Educational Communication, Aruna Asaf Ali Marg, New Delhi.<br>3. ಸಾತವಲ್ಲಿ ವೆಂಕಟವಿಶ್ವನಾಥ, ಕಾವ್ಯನಾಮ "ಹರಿಹರಪ್ರಿಯ" ಹುಟ್ಟಿದ್ದು 20ಜನವರಿ 1952, ಕನ್ನಡ ರಾಜ್ಯದ ಮೈಸೂರು ನಗರದಲ್ಲಿ ಬೆಳೆದದ್ದು ಮಂಡ್ಯ ಜಿಲ್ಲೆ ಹಳ್ಳಿಯಲ್ಲಿ 11ನೇ ತರಗತಿಯವರೆಗೆ ವಿದ್ಯಾಭ್ಯಾಸ. ಆದರೂ ಕನ್ನಡ ವಿಶ್ವವಿದ್ಯಾನಿಲಯ (ಹಂಪಿ) ಪಿಹೆಚ್.ಡಿ ಮಾಹ ಪ್ರಬಂಧ ಮೌಲ್ಯಮಾಪಕರಾಗಿದ್ದರು. ವಿಶೇಷವಾಗಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ, ವಿಚಾರಗೋಷ್ಠಿಗಳಲ್ಲಿ ಸಮ್ಮೇಳನ ಅಧ್ಯಕ್ಷರಾಗಿ, ಉದ್ಘಾಟಕರಾಗಿ ಪಾಲ್ಗೊಂಡಿದ್ದಾರೆ. ಕಳೆದ 45 ವರ್ಷಗಳಿಂದ ಪುಸ್ತಕ ಸಂಗ್ರಹ ಕಾರ್ಯದಲ್ಲಿ ತೊಡಗಿ, ಈವರೆಗೂ 1 ಲಕ್ಷ ಕನ್ನಡ, ತೆಲುಗು, ಇಂಗ್ಲೀಷ್ ಪುಸಕ್ತಗಳು ಹಾಗೂ ಪತ್ರಿಕೆಗಳನ್ನು ಸಂಗ್ರಹಿಸಿದ್ದಾರೆ. ವಿಶೇಷವಾಗಿ ಪುಸ್ತಕ ಪ್ರದರ್ಶನ ನಡೆಸಿ ಪುಸ್ತಕ ಸಂಸ್ಕೃತಿ ಉಳಿಸಲು ಹೋರಾಡಿದ್ದಾರೆ. ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಬಹುಮಾನ, ವರ್ಧಮಾನ ಉದಯೋನ್ಮುಖ ಶ್ರೇಷ್ಠ ಸಾಹಿತಿ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ, |

| | |
|---|---|
| | ಸರ್ ಎಂ.ವಿಶ್ವೇಶ್ವರಾಯ ನವರತ್ನ ಪ್ರಶಸ್ತಿ ಇವುಗಳಲ್ಲದೆ, ಕರ್ನಾಟಕ ರಾಜ್ಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಇವರ "ಪುಸ್ತಕದ ಮನೆ"ಯನ್ನು ಸಂಸ್ಥೆ ಎಂದು ಗುರುತಿಸಿ ಗೌರವಿಸಿದೆ.<br><br>4.ಶ್ರೀಮತಿ ತುಳಸಿಗೌಡ is an Indian environmentalist from Honnali village, Ankola taluk in Karnataka state. She has planted more than 30,000 saplings and looks after the nurseries of the Forest Department. Her work has been honoured by the Government of India and other organisations. In 2021, the Government of India awarded her the Padma Shri, the country' fourth highest civilian award. She is known as the "Encyclopedia of the Forest" for her ability to recognize the mother tree of any species of tree.<br><br>5. ಶ್ರೀ ಗಿರೀಶ್ ಹೊಸನಗರ ನಾಗರಾಜೇಗೌಡ also known as Girish N.Gowda is Paralympic high jumper from India. He was born with a disability in the left leg. He represented India in the 2012 Summer Paralympic games held in London in the men's high jump F-42 category and won the silver medal in the finals with a jump of 1.74 meters using scissors technique. He became the first Indian to win a medal at that event and the 8th Indian to win a medal at the Paralympics. |
| **ವಿಶೇಷ ಸಭೆ 03** | ವಿಶ್ವವಿದ್ಯಾನಿಲಯದ ಮುಗಿದಿರುವ ಕಾಮಗಾರಿ/ಅಭಿವೃದ್ಧಿ ಕಾರ್ಯಗಳ ಹುಂಡಿಗಳನ್ನು ಪಾವತಿಸುವ ಬಗೆಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಈಗಾಗಲೇ ಕೈಗೊಂಡು ಮುಗಿದಿರುವಂತಹ ಕಾಮಗಾರಿಗಳು ಹಾಗೂ ಅಭಿವೃದ್ಧಿಕಾರ್ಯಗಳ ಹುಂಡಿಗಳನ್ನು ಪಾವತಿ ಮಾಡುವ ಸಂಬಂಧ ವಿಶ್ವವಿದ್ಯಾನಿಲಯದ ಹಣಕಾಸು ಲಭ್ಯತೆಯಾನುಸಾರ ಹುಂಡಿಗಳನ್ನು ಹಂತ ಹಂತವಾಗಿ ಆದ್ಯತೆ ಮೇರೆಗೆ ಪಾವತಿಸುವ ಸಂಬಂಧ ವಿಶೇಷ ಸಿಂಡಿಕೇಟ್ ಸಭೆಯು ಅನುಮೋದಿಸಿತು. |

<u>ಇತರೆ ವಿಷಯಗಳು:</u>

1. ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ಶಾಸನಬದ್ಧ ಅಧಿಕಾರಿಗಳು, ಸಿಂಡಿಕೇಟ್ ಸದಸ್ಯರು ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯ ಸದಸ್ಯರು ಧರಿಸಲಿರುವ ಉಡುಪುಗಳಿಗೆ Dress Code ಗೆ ಸಂಬಂಧಿಸಿದಂತೆ Statute ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಸಿದ್ದಪಡಿಸಲಾದ ಪರಿನಿಯಮವನ್ನು ಕರ್ನಾಟಕ ಸರ್ಕಾರದ ಅನುಮೋದನೆಗಾಗಿ ಮಂಡಿಸಿದ್ದು, ಸಮಯದ ಅಭಾವವಿರುವುದರಿಂದ ಇದೊಂದು ಬಾರಿಗೆ ಹಿಂದಿನ ಘಟಿಕೋತ್ಸವದ ಉಡುಪನ್ನೇ ಧರಿಸಲು ಸಭೆಯು ತೀರ್ಮಾನಿಸಿತು.

2. 54 ತಾತ್ಕಾಲಿಕ ಉದ್ಯೋಗಿಗಳಿಗೆ ಪದನಾಮ ಬದಲಾವಣೆ ಮಾಡಿರುವುದನ್ನು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪನೆ ಮಾಡಿದ್ದು, ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಸದರಿ ವಿಷಯವನ್ನು ಪರಿಶೀಲನೆ ನಡೆಸುವ ಸಲುವಾಗಿ ಸಿಂಡಿಕೇಟ್ ಉಪಸಮಿತಿಯನ್ನು ರಚಿಸಲಾಗಿದೆ ಎಂದು ಕುಲಸಚಿವರು ಸಭೆಯ ಗಮನಕ್ಕೆ ತಂದರು. ಡಾ.ಚೈತ್ರನಾರಾಯಣ ನವರು ಮಾತನಾಡಿ ರೂಪ, ಶ್ರೀನಿಧಿ ತಾತ್ಕಾಲಿಕ ಉದ್ಯೋಗಿಗಳ ಪದನಾಮ ಬದಲಾವಣೆ ಹಾಗೂ ವೇತನ ಹೆಚ್ಚಾಗಿದೆ ಎಂದು ತಿಳಿಸಿದರು. ಇದಕ್ಕುತ್ತರವಾಗಿ ಕುಲಸಚಿವರು ಮಾತನಾಡಿ, ಗ್ರೂಪ್ 'ಸಿ', 'ಡಿ' ತಾತ್ಕಾಲಿಕ ಉದ್ಯೋಗಿಗಳ ಪಟ್ಟಿಯನ್ನು ಸಿದ್ದಪಡಿಸಲಾಗಿದೆ ಎಂದು ತಿಳಿಸಿದರು. ಶ್ರೀ ಎಂ.ಬಿ.ಗಪ್ಪಣ್ಣನವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನವಾಗಿರುವಂತೆ ಎಲ್ಲರಿಗೂ ವೇತನ

ಪಾವತಿ ಮಾಡಿ ಎಂದು ತಿಳಿಸಿದರು. ಶ್ರೀಮತಿ.ವೈ.ಕೆ.ಪವಿತ್ರರವರು ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತಾತ್ಕಾಲಿಕ ಉದ್ಯೋಗಿಗಳ ಪದನಾಮ ಬದಲಾವಣೆಯ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಪ್ರಸ್ತಾಪಿಸಲಾಯಿತು ವೇತನ ಹೆಚ್ಚುವರಿ ಮಾಡುವ ವಿಷಯವಲ್ಲ ಎಂದು ತಿಳಿಸಿದರು. ಕುಲಸಚಿವರು ಮಾತನಾಡಿ ತಾತ್ಕಾಲಿಕ ಉದ್ಯೋಗಿಗಳ ಪದನಾಮ ಬದಲಾವಣೆ ಮಾಡಿರುವುದನ್ನು ಸಿಂಡಿಕೇಟ್ ಉಪಸಮಿತಿಯ ತೀರ್ಮಾನ ಬರುವವರೆಗೆ ತಡೆಹಿಡಿಯಬೇಕೆಂದು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಯಿತು.

ಪ್ರೊ. ವೆಂಕಟೇಶ್ ಕುಮಾರ್ ರವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಹುದ್ದೆಯಲ್ಲಿ ಅಸಮಾನತೆ, ವೇತನದಲ್ಲಿ ಅಸಮಾನತೆ ಹಾಗೂ ಹುದ್ದೆ ಮತ್ತು ವೇತನದಲ್ಲಿ ಅಸಮಾನತೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದು, ಸಮಿತಿ ರಚಿಸಿ ಸದರಿ ವಿಷಯಗಳನ್ನು ಪರಿಶೀಲಿಸಿ ನಂತರ ನಿರ್ಧಾರ ಮಾಡಿ ಎಂದು ತಿಳಿಸಿದೆ ಎಂದರು. ಇದಕ್ಕುತ್ತರವಾಗಿ ಮಾನ್ಯ ಕುಲಪತಿಯವರು ಮಾತನಾಡಿ, ಈಗಾಗಲೇ ಸಿಂಡಿಕೇಟ್ ಉಪಸಮಿತಿಯನ್ನು ರಚಿಸಲಾಗಿದೆ ಎಂದು ತಿಳಿಸಿದರು. ಮುಂದುವರೆದು, ಸಮಿತಿಯ ಅಧ್ಯಕ್ಷರು ಯಾವುದೇ ತೀರ್ಮಾನ ಕೈಗೊಳ್ಳುವ ಮೊದಲು ಕಾನೂನು ಅಭಿಪ್ರಾಯವನ್ನು ಸಹ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಡಾ. ಚೈತ್ರ ನಾರಾಯಣರವರು ಮಾತನಾಡಿ, ಪದನಾಮ ಬದಲಾವಣೆ ಕುರಿತು ಡಾ. ಚೈತ್ರ ನಾರಾಯಣರವರು ವಿರೋಧ ವ್ಯಕ್ತಪಡಿಸಿರುವುದಾಗಿ ಕುಲಸಚಿವರು ಹೇಳಿದ್ದಾರೆಂದು ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಇವರ ಕಛೇರಿಯಿಂದ ತಮಗೆ ದೂರವಾಣಿ ಕರೆ ಬಂದಿರುವುದಾಗಿ ತಿಳಿಸುತ್ತಾ ಈ ಬಗ್ಗೆ ಕುಲಸಚಿವರು ತಮ್ಮ ಹೆಸರನ್ನು ತಿಳಿಸುವುದರ ಬಗ್ಗೆ ಪ್ರಶ್ನಿಸಿದರು.

ಇದಕ್ಕುತ್ತರವಾಗಿ ಕುಲಸಚಿವರು ಮಾತನಾಡಿ, ತಾವು ಡಾ. ಚೈತ್ರ ನಾರಾಯಣರವರ ಹೆಸರನ್ನು ಎಲ್ಲಿಯೂ ತಿಳಿಸಿರುವುದಿಲ್ಲ. ಬದಲಾಗಿ ಸಿಂಡಿಕೇಟ್ ಸಭೆಯು ಪದನಾಮ ಬದಲಾವಣೆಯೊಂದಿಗೆ ಕುಲಪತಿಗಳ ಅವಧಿ ಪೂರ್ಣಗೊಳ್ಳುವ ಹಿಂದಿನ ಎರಡು ತಿಂಗಳಲ್ಲಿ ಪ್ರಮುಖ ನೀತಿ ನಿರ್ಧಾರಗಳ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿರುವುದಾಗಿ ತಿಳಿಸಿರುವೆನೆಂದು ಹೇಳಿದರು. ಅಲ್ಲದೆ, ಈ ಎಲ್ಲಾ ವಿಷಯಗಳ ಸಂಬಂಧ ಸುಶಾಸನ ಬಂದ ನಂತರದಲ್ಲಿ ಎಲ್ಲಾ ಸಿಂಡಿಕೇಟ್ ಸಭೆ, ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ಹಣಕಾಸು ಸಮಿತಿ ಸಭೆಗಳು ಲೈವ್‌ನಲ್ಲಿ ಪ್ರಸಾರವಾಗುತ್ತಿದ್ದು ಎಲ್ಲಾ ಮಾಹಿತಿಗಳು ಪಬ್ಲಿಕ್ ಡೋಮೈನ್‌ನಲ್ಲಿ ಲಭ್ಯವಿರುವುದಾಗಿ ತಿಳಿಸುತ್ತಾ, ಪದನಾಮ ಬದಲಾವಣೆ ಸಂಬಂಧ ಈಗಾಗಲೇ ಎರಡು ಸಿಂಡಿಕೇಟ್ ಸಭೆಗಳಲ್ಲಿ ಚರ್ಚಿಸಲಾಗಿದ್ದು ಈ ಸಂಬಂಧ ಸಿಂಡಿಕೇಟ್ ಉಪಸಮಿತಿಯನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಶ್ರೀ.ಎಂ.ಬಿ.ಗಪ್ಪಣ್ಣನವರು ಮಾತನಾಡಿ ಪದನಾಮ ಬದಲಾವಣೆ ಮಾಡಿರುವ ಸಂಬಂಧ ಯಾವುದೇ ಆದೇಶ ಕೊಟ್ಟಿದ್ದಲ್ಲಿ ಅದನ್ನು ರದ್ದುಪಡಿಸಿ ಯಥಾಸ್ಥಿತಿ ಕಾಪಾಡಿ, ಹಳೆಯ ಪದನಾಮದಲ್ಲೇ ಮುಂದುವರಿಸಿ ಎಂದು ತಿಳಿಸಿದರು ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರ ಕಛೇರಿಯಿಂದ ಮಾಹಿತಿ ಕೋರಿದಾಗ ನಿಯಮಾನುಸಾರ ಮಾಹಿತಿ ನೀಡಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

3. ಡಾ.ಚೈತ್ರ ನಾರಾಯಣ ರವರು ಮಾತನಾಡಿ, IOE ನಲ್ಲಿ 17 ಜನ ತಾತ್ಕಾಲಿಕ ಕರ್ತವ್ಯ ನಿರ್ವಹಿಸುತ್ತಿದ್ದು, ಅವರಿಗೆ 2 ರಿಂದ ಮೂರು ತಿಂಗಳ ವೇತನ ಪಾವತಿಸಿರುವುದಿಲ್ಲವೆಂದು

ಅವರಿಗೆ ವೇತನ ಸಹ ಹೆಚ್ಚಳವಾಗಿದ್ದು, ಅವರಿಗೆ ಕನಿಷ್ಟಪಕ್ಷ ಹಳೆ ವೇತನವನ್ನು ಪಾವತಿಸುವಂತೆ ಕೋರಿದರು.

ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ, IOE ನಲ್ಲಿ ಪ್ರಾಜೆಕ್ಟ್ ಮುಗಿದ ನಂತರ ಆರು ತಿಂಗಳ ಹಿಂದೆಯೇ ತಾತ್ಕಾಲಿಕ ಉದ್ಯೋಗಿಗಳಾಗಿ ನೇಮಕ ಮಾಡಲಾಗಿದೆ ಹಾಗೂ ಸದರಿಯವರಿಗೆ ಜಿಆರ್ಎ ಖಾತೆಯಿಂದಲ್ಲೇ ವೇತನ ಪಾವತಿಸಲಾಗುತ್ತಿದೆಯೆಂದು ತಿಳಿಸಿದರು. ಎರಡು ತಿಂಗಳು ವೇತನವನ್ನು ನೀಡಿದ್ದು, ಪ್ರಸ್ತುತ ವೇತನ ಪಾವತಿ ಮಾಡುತ್ತಿಲ್ಲವೆಂದು ತಿಳಿಸಿದರು. ಸದರಿಯವರಿಗೆ ವೇತನ ಪಾವತಿ ಮಾಡುವಂತೆ ಕೋರಿದರು.

4. ಮಾನ್ಯ ಕುಲಪತಿಯವರು ಮಾತನಾಡಿ, ಚೈನೀಸ್ ಪ್ರೊಗ್ರಾಂಗೆ ಸಂಬಂಧಿಸಿದಂತೆ ವಿದ್ಯಾರ್ಥಿನಿಲಯವನ್ನು ನಿರ್ಮಾಣ ಮಾಡಲಾಗಿದ್ದು, ಕೋವಿಡ್-19 ಹಿನ್ನೆಲೆಯಿಂದ ಯಾರು ಪ್ರವೇಶಾತಿ ಪಡೆದಿರುವುದಿಲ್ಲ.ವಿದ್ಯಾರ್ಥಿನಿಲಯದ ನಿರ್ವಹಣೆಗಾಗಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಏಕಾಏಕಿ ಕರ್ತವ್ಯದಿಂದ ಬಿಡುಗಡೆ ಮಾಡುವುದು ಸೂಕ್ತವಲ್ಲವೆಂದು ಹಾಗೂ ಸದರಿಸಿಬ್ಬಂದಿಗಳ ವೇತನವನ್ನು "ಚೈನೀಸ್ ಪ್ರೊಗ್ರಾಂ" ಶೀರ್ಷಿಕೆಯಿಂದ ಪಾವತಿಸಲು ಕ್ರಮ ವಹಿಸಬಹುದೆಂದು ತಿಳಿಸಿದರು.

ಈ ಸಂಬಂಧ ಹಣಕಾಸು ಅಧಿಕಾರಿಗಳಾದ ಡಾ. ಸಂಗೀತ ಗಜಾನನ ಭಟ್ ರವರು ಮಾತನಾಡಿ, ಚೈನಿಸ್ ಪ್ರೊಗ್ರಾಂ ಅಡಿಯಲ್ಲಿ ಕಾರ್ಯಗತಗೊಂಡಿದ್ದ ಪ್ರಾಜೆಕ್ಟ್ ಅವಧಿಯು ಪೂರ್ಣಗೊಂಡಿದ್ದು, ಇಲ್ಲಿಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ವಿಶ್ವವಿದ್ಯಾನಿಲಯವು ಮುಂದುವರೆಸಿರುತ್ತಾರೆ. ಚೈನಿಸ್ ಪ್ರೊಗ್ರಾಂ ವಿದ್ಯಾರ್ಥಿನಿಲಯದಲ್ಲಿ ಯಾರು ಪ್ರವೇಶಾತಿ ಪಡೆದಿಲ್ಲದ ಕಾರಣದಿಂದ ಆದಾಯವಿರುವುದಿಲ್ಲ. ಪ್ರಸ್ತುತ ವಿದ್ಯಾರ್ಥಿನಿಲಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನೀಡಲಾಗಿದ್ದು ಅದರಿಂದ ಬರುವ ಆದಾಯದಲ್ಲಿ ಚೈನಿಸ್ ಪ್ರೊಗ್ರಾಂನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಬಹುದೆಂದು ತಿಳಿಸಿದರು.

5. ಡಾ.ಚೈತ್ರ ನಾರಾಯಣ ರವರು ಮಾತನಾಡಿ, ಆರು-ಏಳು ವರ್ಷಗಳಿಂದ EMMRC, BOM ಸಭೆ ನಡೆದಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಕುಲಪತಿಗಳು ಮಾತನಾಡಿ, ಅರ್ಜಿಗಳನ್ನು ಆಹ್ವಾನಿಸಿ ಖಾಯಂ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಬೇಕೆಂದು ತಿಳಿಸಿದರು.

6. ಸಂತ ಫಿಲೋಮಿನ ಕಾಲೇಜಿನಲ್ಲಿ ಪ್ರವೇಶಾತಿ ಪಡೆದಿರುವ ಇಬ್ಬರು ವಿದ್ಯಾರ್ಥಿಗಳಿಗೆ ಕನಿಷ್ಠ ಪ್ರವೇಶಾತಿಗಳು ಇಲ್ಲದಿರುವ ಕಾರಣಕ್ಕಾಗಿ, ಸದರಿ ಕಾಲೇಜಿನವರು ವರ್ಗಾವಣೆ ಮಾಡಿಕೊಳ್ಳಲು ತಮ್ಮ ಅಭ್ಯಂತರವಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಸದರಿ ವಿದ್ಯಾರ್ಥಿಗಳಿಗೆ Scheme-A ನಲ್ಲಿ ಪ್ರವೇಶಾತಿ ನೀಡಲು ಪ್ರೊ.ವೆಂಕಟೇಶ್ ಕುಮಾರ್ ರವರು ತಿಳಿಸಿದರು.

7. ಪ್ರೊ.ವೆಂಕಟೇಶ್ ಕುಮಾರ್ ರವರು ಮಾತನಾಡಿ ಶ್ರೀ ರಾಘವೇಂದ್ರ.ಕೆ.ಎಸ್, ದ್ವಿತೀಯ ದರ್ಜೆ ಸಹಾಯಕರು ಇವರನ್ನು ನಿಯಮಾನುಸಾರ ಮತ್ತೊಂದು ವರ್ಷಕ್ಕೆ ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದಲ್ಲಿ ನಿಯೋಜನೆಯನ್ನು ಮುಂದುವರೆಸಲು ಶಿಫಾರಸ್ಸು ಮಾಡಿದರು.

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಸಚಿವರು ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಮತ್ತು ಅಧ್ಯಕ್ಷರು**